ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 11.11.2025.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಎಂ ಬಿ ಎಲ್ ವಕೀಲರಿಂದಃ

ಈ ದಾವೆಯನ್ನು ವಾದಿ ನಿವೇಶನದ ಸಂಭಂದ ಸಲ್ಲಿಸಿದ್ದಾರೆ. ಈ ದಾವೆಯನ್ನು ವಾದಿ ಸೈಟ್ (ಹೆಚ್ ಎಲ್) ನಂ.41, 42 ಮತ್ತು 43 ರ ಸಂಬಂಧ ಸಲ್ಲಿಸಿದ್ದಾರೆ. ಈ ಸದರಿ ನಿವೇಶನಗಳ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆಂದರೆ ಸರಿ. ಸದರಿ ರಸ್ತೆಯಲ್ಲಿ ವಾದಿ ಮತ್ತು ಅವರ ಕುಟುಂಬದವರು ಓಡಾಡುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಕಾರ್ಯ ನಿರ್ವಹಣಾಧಿಕಾರಿಗಳು ಬಂದು 08 ಅಡಿ ರಸ್ತೆ ಎಂದು ಸುಮಾರು 05 ವರ್ಷಗಳ ಹಿಂದೆ ತೀರ್ಮಾನ ಮಾಡಿರುತ್ತಾರೆಂದು ನುಡಿಯುತ್ತಾರೆ. ಹೆಚ್ ಎಲ್ ನಂ.36, 40, 41 ಮತ್ತು 42 ರ ದಕ್ಷಿಣ ದಿಕ್ಕಿಗೆ ಖಾಲಿ ಜಾಗ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಒಂದು ನಿವೇಶನದ ದಕ್ಷಿಣ ದಿಕ್ಕಿಗೆ ಪಾಯ ಹಾಕಲಾಗಿದೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಣ್ಣಿನ ಮನೆ ಇದೆ ಎಂದು ಹೇಳಿರುತ್ತೇನೆಂದರೆ ಸರಿ. ಸದರಿ ಮನೆ ಯಾವ ಹೆಚ್ ಎಲ್ ನಂಬರಿನಲ್ಲಿ ಬರುತ್ತದೆಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದರಿ ಮನೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಹೆಚ್ ಎಲ್ ನಂ.36, 40, 41 ಮತ್ತು 42 ರಲ್ಲಿ ಮಣ್ಣಿನ ಮನೆ ಇರುವುದಿಲ್ಲ ಎಂದರೆ ಸರಿ.

2. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಕ್ರಯ ಪತ್ರಗಳನ್ನು ಮತ್ತು ಹಕ್ಕು ಪತ್ರವನ್ನು ನಾನು ನೋಡಿರುವುದಿಲ್ಲ . ಆದರೆ ದಾಖಲೆಗಳ ಬಗ್ಗೆ ಕೇಳಿರುತ್ತೇನೆ. ಹೆಚ್ ಎಲ್ ನಂ.40 ರ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಪಶ್ಚಿಮ ದಿಕ್ಕಿನ ಹುಣಸೇ ಮರದ ನಂತರ ನನ್ನ ಖಾಲಿ ಜಾಗ ಇದೆ ಎಂದು ಹೇಳಿದ್ದು ಅದರ ಸಂಖ್ಯೆ ಹೆಚ್ ಎಲ್ ನಂ.60 ಆಗಿರುತ್ತದೆ.

3. ನಿ.ಪಿ.5 ರಿಂದ 8 ಭಾವ ಚಿತ್ರಗಳಲ್ಲಿ ಕಂಡು ಬರುವ ರಸ್ತೆಯಲ್ಲಿ ವಾದಿಗಳು ಓಡಾಡುತ್ತಾರೆಂದರೆ ಸರಿ. ನಿ.ಪಿ.5 ರಿಂದ 8 ರಲ್ಲಿ ಕಂಡು ಬರುವ ರಸ್ತೆಯನ್ನು ಹೊರತು ಪಡಿಸಿ, ಬೇರೆ ರಸ್ತೆ ವಾದಿಗಳ ಮನೆಗೆ ಹೋಗಲು ಇರುತ್ತದೆ . ಸದರಿ ಬೇರೆ ರಸ್ತೆ ವಾದಿಗಳ ಮನೆಯ ದಕ್ಷಿಣಕ್ಕೆ ಇರುತ್ತದೆ. ವಾದಿಗಳ ಮನೆ ದಕ್ಷಿಣಕ್ಕೆ ಇದೆ ಎಂದು ಹೇಳುವ ರಸ್ತೆಯ ದಾಖಲೆಗಳನ್ನು ನಾನು ನೋಡಿಲ್ಲ. ನಿ.ಪಿ.5 ರಿಂದ 8 ರಲ್ಲಿ ಕಂಡು ಬರುವ ರಸ್ತೆಯ ಮೇಲೆ ಪ್ರತಿವಾದಿಗಳು ಪಾಯ ಹಾಕಲು ಪ್ರಯತ್ನಿಸಿದಾಗ, ವಾದಿ ಮತ್ತು ಪ್ರತಿವಾದಿಗಳ ನಡುವೆ ಗಲಾಟೆ ಆಯಿತು ಎಂದರೆ ಸರಿ. 1 ನೇ ಪ್ರತಿವಾದಿಯು 12 ಅಡಿ ರಸ್ತೆಯನ್ನು 08 ಅಡಿ ರಸ್ತೆ ಎಂದು ಪಂಚಾಯ್ತಿಯಲ್ಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು, ವಾದಿಗಳ ಓಡಾಟಕ್ಕೆ ತೊಂದರೆ ನೀಡಿದ್ದರಿಂದ ಈ ದಾವೆ

ಸಲ್ಲಿಸಿದಾರೆಂದರೆ ಸರಿಯಲ್ಲ. ವಿವಾದಿತ ರಸ್ತೆಯ ದಕ್ಷಿಣ ದಿಕ್ಕಿಗೆ ನಂಜೇಗೌಡರ ಮನೆ ಬರುತ್ತದೆಂದರೆ ಸರಿ. ನನಗೂ ವಾದಿಗೂ ದ್ವೇಷ ಇರುವುದರಿಂದ ವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳುಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

<u>ಮರು ವಿಚಾರಣೆಃ ಇಲ್ಲಃ</u>

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.